Construction of Bridge near Padavalalu

531. Sri S. H. PUTTARANGANATH (Belur).—

Will the Minister for Public Works be pleased to state.—

(*a*) whether an estimate was prepared for construction of a bridge across the river Yagachi near Padavalalu; and why it has been changed to Pura in 1963 (the reasons may be given);

(*b*) the cost of the bridge;

(*c*) the reason for delaying to provide funds and the time required to complete the work ?

A.— Sri VEERENDRA PATIL (Minister for Public Works).—

(*a*) Yes. The site has not been changed from Padavalalu to Pura.

(*b*) Rs. 6.00 lakhs.

(*c*) Due to paucity of funds; this does not arise as the estimate is not yet sanctioned.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಸ್ವಾಮಿ, (ಇ) ಪ್ರಶ್ನೆಗೆ ಉತ್ತರವಾಗಿ ಹಣದ ಕೊರತೆಯಿಂದಾಗಿ ಅಂದಾಜನ್ನು ಇನ್ನೂ ಮಂಜೂರ್ಮಾಡದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ, 1965—66 ನೇ ಸಾಲಿನ ಬಡ್ಜೆಟ್ಟಿನಲ್ಲಿ ಅದನ್ನು ಇನ್‌ಕ್ಲೂಡ್ ಮಾಡಿದ್ದಾರೆ. ಮತ್ತು ನಿವೇಶನವನ್ನು ಪುರಕ್ಕೆ ಬದಲಾಯಿಸಲು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ಇಲ್ಲಿ ಈ ರೀತಿ ಉತ್ತರವನ್ನು ಕೊಟ್ಟಿದ್ದೀರಿ, ಆದ್ದರಿಂದ ಈಗಲಾದರೂ ಪಡವಲಾಳುವಿನ ಕೆಲಸವನ್ನು ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

†ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದ್ದೇನೆ, ಈ ಸೇತುವೆಯನ್ನು ಕಟ್ಟಬೇಕಾದರೆ 6 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಆದ್ದರಿಂದ ಅದನ್ನು ಈ ಸಲದ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಈ ಕಾರಣದಿಂದ 6 ಲಕ್ಷ ರೂಪಾಯಿಗಳ ಖರ್ಚಿನ ಕೆಲಸವನ್ನು ಈ ವರ್ಷವೇ ತೆಗೆದು ಕೊಳ್ಳುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಪಡವಲಾಳು ಮತ್ತು ಪುರದ ಸೈಟುಗಳು ಏನಿವೆ ಅವು ಯಗಚಿ ಪ್ರಾಜೆಕ್ಟನ್ನು ಕಟ್ಟುವುದಾದರೆ ಸಬ್‌ಮರ್ಜ್ ಆಗುವ ಪರಿಸ್ಥಿತಿ ಇದೆ. ಆದ್ದರಿಂದ ಅದನ್ನು ವಿಚಾರ ಮಾಡಿದಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಹೋದವರ್ಷ ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸಿದ್ದರು. ಈ ವರ್ಷ ಅದನ್ನು ಕೈ ಬಿಡುವುದಕ್ಕೆ ಕಾರಣವೇನು.

ಶ್ರೀ ವೀರೇಂದ್ರ ಪಾಟೀಲ್.—ಯಗಚಿ ಪ್ರಾಜೆಕ್ಟಿನಿಂದ ಆ ಸೇತುವೆಗಳು ಸಬ್‌ಮರ್ಜ್ ಆಗುವ ಪರಿಸ್ಥಿತಿ ಇದೆ, ಅವು ಮುಳುಗಡೆಯಾದರೆ ಅದರಿಂದ ಲಾಭವಾಗುವುದಿಲ್ಲ. ಆದ್ದರಿಂದ ಅದನ್ನು ವಿಚಾರ ಮಾಡಿದ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಯಗಚಿ ಪ್ರಾಜೆಕ್ಟಿನಿಂದ ಈ ಸೇತುವೆ ಮುಳುಗಡೆಯಾಗುವ ಪ್ರಶ್ನೆ ಬರುವುದಿಲ್ಲ. ಇದು ಕೆಳಗಡೆ ಬರತಕ್ಕ ನಿವೇಶನ. ಆದ್ದರಿಂದ ಈಗಲಾದರೂ ಸರ್ಕಾರದವರು ಇದನ್ನು ಪರಿಶೀಲನೆ ಮಾಡಿ, ಈ ಸೇತುವೆಯನ್ನು ಕಾರ್ಯಗತ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ಹೇಳಿದ್ದೇನೆ. ಈ ಸೇತುವೆ ಸಬ್ ಮರ್ಜ್ ಆಗುವ ಏರಿಯಾದಲ್ಲಿ ಬರುತ್ತದೆ ಎಂದು. ಅದನ್ನು ಪರಿಶೀಲನೆ ಮಾಡಿ ಅದು ಸಬ್‌ಮರ್ಜ್ ಆಗುವುದಿಲ್ಲ ಎನ್ನುವುದಾದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

Sri C. K. RAJAIAH SHETTY.—My friend says that it comes in the back portion of the Yagchi Project whereas the Minister says it is in the submersion area. Which is correct ?

ಶ್ರೀ ವೀರೇಂದ್ರ ಪಾಟೀಲ್.—ಅದು ಡ್ಯಾಮಿನ ಹಿಂದೆ ಬರುವುದಿಲ್ಲ. ವಾಟರ್ ಸ್ಪ್ರೆಡ್ ಏರಿಯಾದಲ್ಲಿ ಬರುತ್ತದೆ.